ಭಾರತಿ ಮಾನಗೆ, ಹೊನ್ನಾವರ
ಮಾನವನ ಚಿತಾಭಸ್ಮವನ್ನು ನದಿಯಲ್ಲಿ ವಿಸರ್ಜಿಸುವುದೇಕೆ?



'ನಾನು ಬೂದಿಯಿಂದ ಎದ್ದುಬರುತ್ತೇನೆ' ಎಂದು ಹೆದರಿಸಿದವರ ಆಶಯಗಳನ್ನು ಮುಳುಗಿಸಲು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಇಲ್ಲೊಬ್ಬ ಪತ್ನಿದೇವೋಭವ ಎನ್ನುತ್ತಿದ್ದಾನಲ್ಲ?
ತಿಳಿಯಿತು. ಕರೆದಾಗ ಬಂದು, ಮಿಕ್ಕೆಲ್ಲ ಸಮಯ ಕಾಣದಂತಿರಲೆಂಬ ಸುಪ್ತ ಆಶಯ.

ವಿ. ಹಮೀದ್, ವಿಟ್ಲ
ಈಜುಕೊಳದ ಬದಿಯಿಂದ ಸುಂದರಿಯೊಬ್ಬಳು ಕರೆಯುತ್ತಿದ್ದಾಳೆ. ಏನ್ಮಾಡಲಿ ಸಾರ್?
ಛೆ! ನಿಮ್ಮ 'ಇಣುಕು ಬುದ್ಧಿ' ಅವಳಿಗೆ ಗೊತ್ತಾಗಿಬಿಟ್ಟಿದೆ. ಓಡಿ!

ಕೊಟ್ಟೂರು ಜವಳಿ ಜಯಣ್ಣ ದಾವಣಗೆರೆ
ಫ್ಲೆಕ್ಸ್‌ನಲ್ಲಿ ರಾಜಕಾರಣಿಗಳು ನಡೆಯುತ್ತಾ ಇದ್ದಾರೆ ಎನ್ನುವಂತೆ ಪೋಸ್ ಕೊಡುವುದೇಕೆ?



ಅದು ಸ್ತಬ್ಧಚಿತ್ರವಲ್ಲವೇ! ಇವರನ್ನು ನಂಬಿದವರ ಭವಿಷ್ಯದ ನಡಿಗೆ ಸ್ತಬ್ಧ ಎಂದು ಸೂಚಿಸಲು.

ರಮಾನಂದ ಶರ್ಮಾ, ಬೆಂಗಳೂರು
ಅತಂತ್ರ ವಿಧಾನಸಭೆಯಲ್ಲಿ ಪಕ್ಷೇತರ ಶಾಸಕನಾಗಬೇಕೆನ್ನುವ ಆಶೆ ಇಲ್ಲೊಬ್ಬರಿಗಿದೆ. ನೀವೇನಂತೀರಿ?
ಜಗದ ಸೃಷ್ಟಿಯಲ್ಲಿ ಕೀಟಗಳನ್ನು ಕಿತ್ತು ತಿನ್ನುವ ಕ್ರಿಮಿಗಳೂ ಇವೆ ಎನ್ನುತ್ತೇನೆ.

ಮೆಹಬೂಬ ಶೇಖಬಡೆ, ಮೂಡಲಗಿ
ಸತ್ಯ ಯಾವಾಗಲೂ ಮೌನವಾಗಿ ಇರುತ್ತದೆಯಲ್ಲ ಗುರುಗಳೇ?
ಧ್ವನಿ ಹೊರಡದಂತೆ ಕತ್ತು ಹಿಸುಕಿರುತ್ತಾರಲ್ಲ.

ರತ್ನಾ ಅಶೋಕ ಗೊರವರ, ಧಾರವಾಡ
ಇಂದಿನ ಕಿಶೋರಿಯರು ನಾಚಿ ನೆಲ ಕೆರೆಯುವುದಿಲ್ಲ. ಏಕೆ?
ಎಲ್ಲದರಲ್ಲೂ ಕಿಶೋರರನ್ನೇ ನಾಚಿಸುವ ಮಟ್ಟಕ್ಕೆ ಬೆಳೆದಿರುವುದರಿಂದ.

ಪೇಂಟರ್ ಪಾಪು, ಸಂತೇಮರಹಳ್ಳಿ
ಮನುಷ್ಯ ಸತ್ತಮೇಲೆ ತಿಥಿ ಮಾಡುವುದು ಅವನ/ಳ ಆತ್ಮಕ್ಕೆ ಶಾಂತಿ ಸಿಗಲಿ ಅಂತಾನಾ?
ಊಹೂಂ. ಪ್ರೇತಾತ್ಮವಾಗಿ ಕಾಡದಿರಲೆಂದು ಕೊಡುವ ಲಂಚ್(ಚ).

ಬಿ. ಚಂದ್ರೇಗೌಡ, ಬೆಂಗಳೂರು
ಎತ್ತು ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಅಂದ್ರೆ ಏನರ್ಥ?
ಶುದ್ಧ ಮೊದ್ದನಾದರೂ ಕುಲಪುತ್ರನಾದರೆ ಪಾರ್ಟಿ ಪ್ರೆಸಿಡೆಂಟ್ ಮಾಡು ಎಂದು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಸಂಸಾರವೆನ್ನುವುದು ನಿಜಕ್ಕೂ ಸಾಗರವೇ?
ಸಿಟಿಯಲ್ಲಿ ವೀಕೆಂಡಲ್ಲಂತೂ ನಿಜ; ಬ್ರೇಕ್‌ಫಾಸ್ಟ್ ಶಾಂತಿಸಾಗರ, ಲಂಚ್ ಕ್ಷೀರಸಾಗರ; ಚಾಟ್ಸ್ ಶ್ರೀಸಾಗರ; ಡಿನ್ನರ್ ಸುಖಸಾಗರ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪಾಪ ಮಾಡಿದವರು ಗಂಗಾನದಿಯಲ್ಲಿ ಜಳಕ ಮಾಡಬೇಕು. ಪುಣ್ಯ ಮಾಡಿದವರು?
ಶುದ್ಧ ನೀರಿನಲ್ಲಿ.

ಪಿ.ಜೆ. ರಾಘವೇಂದ್ರ, ಮೈಸೂರು
ಟೀವಿ ಧಾರಾವಾಹಿಗಳಲ್ಲಿ ಪತಿಯು ಪತ್ನಿಯನ್ನು ಬಹುವಚನದಲ್ಲೇ ಮಾತನಾಡಿಸುವುದೇಕೆ?
ಇಲ್ಲಿನ ಪತ್ನಿ ಬೇರೆ ಸೀರಿಯಲ್ಲಲ್ಲಿ ತಾಯಿ/ಬೀಗ್ತಿ ಆಗಿರುತ್ತಾಳಲ್ಲ, ಕನ್‌ಫ್ಯೂಸ್ ಆಗದಿರಲೆಂದು ಮುನ್ನೆಚ್ಚರಿಕೆ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
ಹೆಂಗಸರನ್ನೇ ಏಕೆ ದೆವ್ವಗಳು ಮೆಟ್ಟಿಕೊಳ್ಳುತ್ತವೆ?
ಅವು ಲವ್ ಫೇಲ್ಯೂರ್ ಆಗಿ ಆತ್ಮಹತ್ಯೆ ಮಾಡಿಕೊಂಡ ಗಂಡುಗಳಂತೆ.

## ಬಹುಮಾನಿತ ಪ್ರಶ್ನೆ

ಸುಂದರ್, ಬೆಂಗಳೂರು
ಪ್ರಮುಖ ಹಬ್ಬಗಳಲ್ಲಿ ಎಲ್ಲ ವಸ್ತುಗಳಿಗೂ ಡಿಸ್ಕೌಂಟ್ ಉಂಟು. ಮದ್ಯಕ್ಕೆ ಏಕಿಲ್ಲ?
ಸೌದೆ, ಮಡಕೆ, ಬೊಂಬುಗಳಿಗೂ ಇಲ್ಲ. ಸಾವಿನತ್ತ ಒಯ್ಯುವುದಕ್ಕೆ ಡಿಸ್ಕೌಂಟ್ ಇರುವುದಿಲ್ಲ.

ಹರಿತಸ, ಬೆಂಗಳೂರು
ಹನುಮಂತ ಯಾವ ಜಾತಿ?
ಹ ಹದದಲ್ಲಿ ಬ್ರಾಹ್ಮಣ; ನು ನುಗ್ಗುವಿಕೆಯಲ್ಲಿ ಕ್ಷತ್ರಿಯ; ಮಂ ಮಂತ್ರಾಲೋಚನೆಯಲ್ಲಿ ವೈಶ್ಯ; ತ ತಗ್ಗಿನಡೆವಲ್ಲಿ ಶೂದ್ರ.

ಕಣ್ಣೂರು ವಿ. ಗೋವಿಂದಾಚಾರಿ, ಮೈಸೂರು
ದೇವರ ಮುಂದೆ ನಾವೆಲ್ಲರೂ ಸಮಾನರು. ಬಾರ್‌ಗಳಲ್ಲೂ ಹಿರಿಕಿರಿಯರು ಒಟ್ಟಾಗೇ ಇರುತ್ತಾರಲ್ಲಾ...?
ಸಂದೇಹವೇನದರೊಳ್? ಅಲ್ಲೂ ದೇವರ ಮುಂದೆಯೇ ಸಮಾನರು! ಬಾಟಲಿಯಲ್ಲಿರುವನು ಪರಮಾತ್ಮ!

ನಾರಾಯಣ ಯಾಜಿ, ಶಿರಾಲಿ
ಕನ್ನಡದ 'ಮೈ' ಪಾತ್ರವೇ ಹಿರಿದಾದ್ದರಿಂದ 'ಮೀ ಟೂ' ವನ್ನು ಕಂಗ್ಲೀಷ್‌ನಲ್ಲಿ 'ಮೈ ಟೂ' ಎನ್ನಬಹುದಲ್ಲವೆ?




ಪಾತ್ರ ಮೈದಲ್ಲ, ಕೊಳಕು ಮನಸ್ಸಿನದು. ಆದ್ದರಿಂದ 'ಮೈಂಡ್ ಥೂ' ಎಂಬುದು ಹೆಚ್ಚು ಸೂಕ್ತ.

ಆರ್. ಮಧುಸೂದನ್, ಹಾಸನ
ಅವರು ಮಗನಿಗೆ ಶ್ರವಣಕುಮಾರ ಎಂದು ಹೆಸರಿಟ್ಟಿದ್ದಾರೆ. ಆದರೂ ಅಪ್ಪ ಅಮ್ಮನನ್ನು ವೃದ್ಧಾಶ್ರಮದಲ್ಲಿ ಇಟ್ಟಿದ್ದಾನಲ್ಲ?
ಜೊತೆಗೊಯ್ದು ಯಾರದೋ ಬಾಣಕ್ಕೆ ಒಡ್ಡುವುದಕ್ಕಿಂತ ಇದೇ ವಾಸಿ ಎನಿಸಿತಂತೆ.

■ ರಾಮ್